# 7

# ನಮ್ಮ ದೇವರು ಪ್ರಕಟಿಸುವಾತನು

ಒಂದು ಪ್ರಾಮುಖ್ಯವಾದ ಅರ್ಥದಲ್ಲಿ ದೇವರು ಮರೆಯಾಗಿ ಇಡಲ್ಪಟ್ಟವನಾಗಿರುವದಿಲ್ಲ. ಆತನ ಅಸ್ತಿತ್ವವೇ ಪ್ರಕಟನೆಯಲ್ಲಿ ಪರಿಣಾಮಗೊಳ್ಳುತ್ತದೆ. ಆತನು ಸ್ವಭಾವದಿಂದ ಸೃಜನಾತ್ಮಕನಾಗಿರುವದರಿಂದ ಸೃಷ್ಟಿಯು ತಾನೇ ತನ್ನ ಸೃಷ್ಟಿಕರ್ತನನ್ನು ಪ್ರಕಟಿಸಿಕೊಳ್ಳುತ್ತದೆ. ಸೃಷ್ಟಿ ಜೀವಿಗಳಾಗಿ ನಮ್ಮ ಸ್ವಂತ ಅಸ್ತಿತ್ವವು ಸೃಷ್ಟಿಯ ಪುರಾವೆಯಾಗಿದೆ.

ಕೆಲವು ವರ್ಷಗಳ ಹಿಂದೆ ವ್ಯಾಟಿಕನ್‌ದಲ್ಲಿಯ ಸಿಸ್ಟೆನ್ ಚಾಪಲಿನಲ್ಲಿ ನಿಂತುಕೊಳ್ಳುವ ಅವಕಾಶ ನನಗೆ ದೊರೆಯಿತು. ಒಳಮಾಳಿಗೆ ಮೇಲೆ ಅದ್ಭುತಕರವಾಗಿ ಚಿತ್ರಿಸಿದ್ದನ್ನು ದೃಷ್ಟಿಸಿದೆನು. ಭಯಭಕ್ತಿಯಿಂದ ನಿಂತು ನೋಡುವಾಗ ಯಾವುದೇ ವ್ಯಕ್ತಿ ಇಂಥ ಚಿತ್ರಕಲೆಯನ್ನು ಹೇಗೆ ಸಾಧಿಸಿರಬಹುದು ಎಂದು ಆಶ್ಚರ್ಯಪಡದೇ ಇರನು. ಆ ಸುಂದರವಾದ ಚಿತ್ರಗಳ ಇರುವಿಕೆಯು ಯಾರೋ ಅವುಗಳನ್ನು ಚಿತ್ರಿಸಿದ್ದಾರೆ ಎಂಬುದಕ್ಕೆ ರುಜುವಾತಾಗಿತ್ತು. ಆ ಆಕರ್ಷಕವಾದ ಚಿತ್ರಗಳ ಹಿಂದೆ ಚಿತ್ರಕಾರರ ಗುಣದ ಬಗ್ಗೆಯೂ ಸುಳುವನ್ನು ಕಂಡುಕೊಂಡೆನು. ಆ ಕಾರ್ಯ ಪರಿಪೂರ್ಣಗೊಳ್ಳಲು ಬಹಳ ಸಮಯ ಬೇಕಾಯಿತು (ನಾಲ್ಕುವರೆ ವರ್ಷಗಳ ಕಾಲವು). ಆ ಕಾರ್ಯಕ್ಕೆ ಬಹಳ ತಾಳ್ಮೆಯು ಅವಶ್ಯವಾಗಿತ್ತು. ಅತೀ ವಿಶೇಷವಾದ ಕೌಶಲ್ಯವು ಪ್ರಕಟವಾಗಿತ್ತು. ಆ ಕಾರ್ಯವು ಗ್ರಹಿಸಿಕೊಳ್ಳುವ ಹಾಗೂ ಸರಿಯಾದ ಪ್ರಮಾಣ ಕಾಯ್ದು ಕೊಳ್ಳುವ ವಿಶೇಷ ತಿಳುವಳಿಕೆಯನ್ನು ತೋರಿಸಿತು. ಅದಕ್ಕೆ ದೈಹಿಕ ಶಕ್ತಿಯ ಉಪಯೋಗದ ಅವಶ್ಯಕತೆಯೂ ಇತ್ತು. ಚಿತ್ರಕ್ಕಾಗಿ ಚಿತ್ರಕಲೆಯ ಅವಶ್ಯಕತೆ ಇತ್ತು ಎಂಬುದಷ್ಟೇ ಅಲ್ಲ, ಆ ಉನ್ನತವಾದ ಕೃತಿಯು ಉನ್ನತ ಮಟ್ಟದ ಚಿತ್ರಕಾರನ ಗುಣಗಳನ್ನು ತಿಳಿಸಿತು.

ಇದರಂತೆ ಸೃಷ್ಟಿಯೊಂದಿಗೂ ಇರುವುದು ಅದು ಒಬ್ಬಾತನ ಅದ್ಭುತಕರವಾದ ಸಾರ್ವತ್ರಿಕ ಪ್ರಕಟನೆಯಾಗಿದೆ. ಸೃಷ್ಟಿಯ ಸಾಮಾನ್ಯ ಪ್ರಕಟಣೆಯಲ್ಲಿ ಕೇವಲ ಸೃಷ್ಟಿಸುವಾತನ ಅಸ್ತಿತ್ವದ "ಕೇವಲ" ಸಂಗತಿಗಿಂತ ಹೆಚ್ಚಾದದ್ದನ್ನು ಗ್ರಹಿಸಿಕೊಳ್ಳುತ್ತೇವೆ. ಸೃಷ್ಟಿಕರ್ತನ "ಗುಣಲಕ್ಷಣದ" ಬಗ್ಗೆ ಕೆಲವೊಂದನ್ನು ನೋಡುತ್ತೇವೆ. ಉದಾಹರಣೆಗಾಗಿ ದೇವರಲ್ಲಿ ಆಗಲೇ ಭಕ್ತಿಯಿಂದ ವಿಶ್ವಾಸವಿಟ್ಟ ದಾವೀದನಿಂದಲೂ ಇದು ಗಮನಿಸಲ್ಪಟ್ಟಿದೆ. "ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆಣಿ ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ" (ಕೀರ್ತನೆ 19:1). ದೇವರ ಕೈಕೆಲಸದಲ್ಲಿ ದಾವೀದನು ಮಹಿಮೆಯನ್ನು ನೋಡಿದನು. ಇಂದು ನಾವು ವಿಶ್ವದ ಅಪರಿಮಿತತೆಯ ಕಡೆಗೆ ಹಾಗೂ ಸೌರವ್ಯೂಹ ಕಾರ್ಯಮಾಡುವದರ ನಿಖರತೆಯ ಕಡೆಗೆ ನಾವು ಆಶ್ಚರ್ಯಚಕಿತರಾಗಿದ್ದೇವೆ. ನಮ್ಮ ವಾಚುಗಳ ಹಾಗೂ ಕ್ಯಾಲಂಡರುಗಳ ಕಡೆಗೆ ನೋಡುವಾಗ ಈ ನಿಶ್ಚಿತತೆಯ ಕ್ರಮದ ಮೇಲೆ ಅವಲಂಭಿಸಿರುತ್ತೇವೆ. ಹಗಲು ರಾತ್ರಿಯು, ಋತುಗಳು ಬರುವ ಮತ್ತು ಹೋಗುವ ಕ್ರಮವನ್ನು ನಾವು ತಿಳಿದಿರುವೆವು. ನಮ್ಮ ಸೂರ್ಯನ ಸುತ್ತ ತಿರುಗುವ ಗ್ರಹಗಳ ಸ್ಥಳವನ್ನೂ ದೂರದ ಭವಿಷ್ಯದಲ್ಲಿ ನಮ್ಮ ಭೂಮಿಯ ಮೇಲೆ ಸಂಭವಿಸುವ ಗ್ರಹಣಗಳು ಎಲ್ಲಿ ಸಂಭವಿಸುತ್ತವೆ ಎಂಬುದನ್ನು ಖಗೋಳ ಶಾಸ್ತ್ರಗಳು ಹೇಳುತ್ತಾರೆ. ಹೌದು ದೇವರ ಸೃಷ್ಟಿಯನ್ನು ಅಧ್ಯಯನ ಮಾಡುವಾಗ ಸೃಷ್ಟಿಕರ್ತನ ಮಹಿಮೆಯನ್ನೂ ಘನತೆಯನ್ನೂ ಕ್ರಮವನ್ನೂ ತಿಳಿದು ಕೊಳ್ಳುತ್ತೇವೆ.

ಇನ್ನೊಂದು ಮುಖ್ಯವಾದ ಅರ್ಥದಲ್ಲಿ, ದೇವರು ಮುಸುಕು ಹಾಕಲ್ಪಟ್ಟವನಾಗಿರುತ್ತಾನೆ.

ಸೃಷ್ಟಿಯಲ್ಲಿ ಸೃಷ್ಟಿಕರ್ತನ ಕೃತ್ಯವನ್ನೂ ಸೃಷ್ಟಿ ಕರ್ತನ ಕೆಲವು "ಗುಣದ ಲಕ್ಷಣಗಳನ್ನೂ" ನೋಡುತ್ತೇವೆ. ಹಾಗಿದ್ದರೂ ಸಿಸ್ಟೈನ ಚಾಪಲ್‌ದಲ್ಲಿ ಆ ಪೇಂಟಿಂಗುಗಳನ್ನು ಯಾರು ಮಾಡಿದರೆಂಬುದು ನನಗೆ ತಿಳಿಯದಿದ್ದಂತಯೇ ಭೂಮಿಯು ತಾನೇ ಆ ಸೃಷ್ಟಿ ಕರ್ತನು ಯಾರು ಎಂಬುದನ್ನು ಹೇಳುವದಿಲ್ಲ. ಉನ್ನತ ಪುನರುಜ್ಜೀವನ ಕಾಲದಲ್ಲಿಯ ಇಟ್ಯಾಲಿಯನ್ ಕಲೆಯ ಚರಿತ್ರೆಯನ್ನು ನಾನು ಓದಿ, ಅಧ್ಯಯನ ಮಾಡಿದಾಗ ಅವುಗಳನ್ನು ಮೈಕಲ್ ಎಂಜಲೋ ಪೇಂಟ ಮಾಡಿದನೆಂದು ಕಲಿತುಕೊಂಡೆನು. ಅದೇ ರೀತಿಯಲ್ಲಿ ದೇವರ ನಿರ್ದಿಷ್ಟವಾದ ಪ್ರಕಟನೆಯಿಂದ, ಬೈಬಲನ್ನು ಓದುವದರಿಂದಲೂ ಅಧ್ಯಯನ ಮಾಡುವದರಿಂದಲೂ ವಿಶ್ವವನ್ನು ನಮ್ಮ ಜಗತ್ತನ್ನು ಹಾಗೂ ನಮ್ಮನ್ನು ಯಾರು ಸೃಷ್ಟಿಸಿದರು ಎಂಬುದನ್ನು ನಾವು ಬೈಬಲಿನಲ್ಲಿ ಕಂಡು ಕೊಳ್ಳುತ್ತೇವೆ. ಪರಿಶುದ್ಧ ಬರಹಗಳ ಸಹಾಯವಿಲ್ಲದೇ ನಾನಾಗಲೀ, ನೀನಾಗಲೀ ಸೃಷ್ಟಿಕರ್ತನು ಯಾರು ಎಂಬುದನ್ನು ತಿಳಿಯಲಾರೆವು.

ಹೀಗಿರುವದರಿಂದಲೇ ದೇವರ ಬಗೆಗಿನ ನಮ್ಮ ಚರ್ಚೆಯಲ್ಲಿ ನಾವು ಬೈಬಲನ್ನು ಜಾಗರೂಕತೆಯಿಂದ ಉಪಯೋಗಿಸುತ್ತಿದ್ದೇವೆ. ಸೃಷ್ಟಿ ಕಾರ್ಯದ ಸಂಗತಿಯನ್ನು ಮತ್ತು ಆ ಸೃಷ್ಟಿಕಾರ್ಯದ ಕೆಲವು ಗುಣಲಕ್ಷಣಗಳನ್ನು ಸ್ಥಾಪಿಸುವಲ್ಲಿ ಸಾಮಾನ್ಯ ಪ್ರಕಟಣೆಯು (ಸೃಷ್ಟಿಯು) ಸಹಾಯಕವಾಗಿದೆಯೆಂದು ಕಂಡುಕೊಂಡಿದ್ದೇವೆ. ಆದರೆ ಬೈಬಲಿನ ದೇವರೆಂದು ಆ ಸೃಷ್ಟಿಕರ್ತನನ್ನು ಗುರಿತಿಸಲು ಪರಿಶುದ್ಧ ಬರಹಗಳ ಕಡೆಗೆ ತಿರುಗಿಕೊಂಡಿದ್ದೇವೆ. ಆತನ ಜನಾಂಗಗಳ ಚರಿತ್ರೆಯಲ್ಲಿ ಆತನ ಬಲವಾದ ಕೃತ್ಯಗಳನ್ನು ಆತನ ಪ್ರಕಟಣೆಯಂತೆ ಅಧ್ಯಯನ ಮಾಡಿದ್ದೇವೆ. ಚರಿತ್ರೆಯಲ್ಲಿ ಆತನು ಒಳಗೊಂಡಿದ್ದರ ಮಹತ್ವವು ಆತನ ನೈತಿಕ ಸ್ವಭಾವದಲ್ಲಿ ನೆಲೆಗೊಂಡಿರುತ್ತದೆ. ಈ ಶ್ರೇಷ್ಠವಾದ ಸತ್ಯವು ಆತನ ಪ್ರತ್ಯೇಕವಾಗಿರುವ ಕೃತ್ಯಗಳಿಂದಲ್ಲ - ಆದರೆ ಬೈಬಲಿನಿಂದ ಬರುತ್ತದೆ. ಆದುದರಿಂದ, ನಮಗೆ ಮುಸುಕು ಹೊಂದಿದ ದೇವರು ಮತ್ತು ಪ್ರಕಟಿಸಲ್ಪಟ್ಟ ದೇವರು ಇದ್ದಾನೆ. ನಿಸರ್ಗದಲ್ಲಿ (ಸೃಷ್ಟಿಯಲ್ಲಿ) ಹಾಗೂ ಬೈಬಲಿನಲ್ಲಿ ಆತನು ಪ್ರಕಟಿಸಲ್ಪಡುವವರೆಗೆ ಆತನು ಮುಸುಕು ಹೊಂದಿದವನಂತಿರುತ್ತಾನೆ ಮತ್ತು ಅನಂತರ ತನ್ನ ಚಿತ್ತದ ಪ್ರಕಾರ ಇರುತ್ತಾನೆ.

## ತನ್ನ ಸಂಪರ್ಕದಲ್ಲಿ ಪ್ರಕಟಿಸಿಕೊಂಡನು

ದೇವರು ತನ್ನನ್ನು ವೈಯಕ್ತಿಕ ಮಾರ್ಗದಲ್ಲಿ ಪ್ರಕಟಿಸಿಕೊಳ್ಳುವದನ್ನು ಬೈಬಲ್ ತೋರಿಸುತ್ತದೆ. ಅಬ್ರಹಾಮ, ಇಸಾಕ, ಯಾಕೋಬ, ಮೋಶೆ, ಸಮುವೇಲ, ನಾತಾನ, ಯೆಹೆಜ್ಕೇಲ ಇತ್ಯಾದಿಯವರೊಂದಿಗೆ ಆತನು ಮಾತಾಡಿದನು.[1] ಈ ಸಂಪರ್ಕಿಸುವಿಕೆಯು ತನ್ನ ಚಿತ್ತವನ್ನು ತಿಳಿಯಪಡಿಸುವದಾಗಿತ್ತು. ತನ್ನ ಜನರು ಯೋಗ್ಯವಾಗಿ ಮಾರ್ಗದರ್ಶನ ಹೊಂದಬೇಕೆಂದು ಆತನು ಬಯಸಿದನು. ಐತಿಹಾಸಿಕ ಸಂಗತಿಗಳಿಗಿಂತ ಹೆಚ್ಚಾದವುಗಳು ಒಳಗೊಂಡಿದ್ದವು. ಅದರಲ್ಲಿಯ ಆತನ ಕೃತ್ಯಗಳಿಗಾಗಿ ಹಾಗೂ ಅವರೊಂದಿಗಿನ ಸಂಬಂಧಕ್ಕಾಗಿ ತರ್ಕವು ಆತನ ಪ್ರಕಟಣೆಯಲ್ಲಿ ಸ್ಪಷ್ಟವಾಗಿದೆ. ಆದುದರಿಂದ ಆತನ ಕೃತ್ಯಗಳೂ ಆತನ ಮಾತುಗಳೂ ಒಂದಾಗಿ ರಕ್ಷಣೆಯನ್ನೂ ಜೋಪಾಸನೆಯನ್ನೂ ಮಾರ್ಗದರ್ಶನವನ್ನೂ ಸಂಧಾನವನ್ನೂ ಕೊಡುವ ದೇವರನ್ನು ಚಿತ್ರೀಕರಿಸುತ್ತವೆ. ಆ ಹಿನ್ನೆಲೆಯೊಳಗಿಂದ ಆತನ ಚಿತ್ತವು ಪ್ರಕಟಿಸಲ್ಪಟ್ಟಿತು.

## ತನ್ನ ಒಡಂಬಡಿಕೆಯಲ್ಲಿ ಪ್ರಕಟಿಸಿಕೊಂಡನು

ಒಡಂಬಡಿಕೆ, ಅದರ ಎಲ್ಲಾ ಸಂಕೀರ್ಣವಾದ ಕಾರ್ಯಕ್ರಮಗಳೊಂದಿಗೆ, ಅವರಿಗಾಗಿ ದೇವರಿಗೆ ಇರುವ ಲಕ್ಷ್ಯದ ಕೇಂದ್ರಬಿಂದುವಾಗಿತ್ತು. ಸೃಷ್ಟಿಯನ್ನು

ಅಧ್ಯಯನ ಮಾಡುವದರಿಂದ, ಚರಿತ್ರೆಯನ್ನು ವಿಶ್ಲೇಷಿಸುವದರಿಂದ ಇಲ್ಲವೇ ಸುತ್ತಲಿನ ಜನಾಂಗಗಳಿಂದ ಸಮಕಾಲೀನ ನಿಯಮಾವಳಿಗಳ ಭಾಗಗಳನ್ನು ಎರವಾಗಿ ತೆಗೆದುಕೊಳ್ಳುವದರಿಂದ ಒಡಂಬಡಿಕೆಯು ಅರ್ಥಮಾಡಿಕೊಳ್ಳಲ್ಪಡುವದಿಲ್ಲ.[2] ಸಿನಾಯಿ ಬೆಟ್ಟದಲ್ಲಿ "ಹತ್ತು ಮಾತುಗಳಿಂದ" ಪ್ರಾರಂಭಿಸಿ ಅದು ಮೋಶೆಗೆ ನೇರವಾಗಿ ದೇವರಿಂದ ಕೊಡಲ್ಪಟ್ಟಿತು.[3]

## ತನ್ನ ಕೃತ್ಯಗಳಲ್ಲಿ ಮತ್ತು ವಾಕ್ಯಗಳಲ್ಲಿ ಪ್ರಕಟಿಸಿಕೊಂಡನು

ದೇವರು ತನ್ನನ್ನು ತನ್ನ ಜನರಿಗೆ ಸ್ವಂತವಾಗಿ ಪ್ರಕಟಿಸುವ ವಿಧಾನವನ್ನು ತನ್ನ ಕೃತಿಗಳಿಂದಲೂ ತನ್ನ ಮಾತುಗಳಿಂದಲೂ ಯುಗಗಳಲೆಲ್ಲಾ ಮುಂದರಿಸಿದನು. ಆತನ ಕೃತ್ಯಗಳು ಆತನ ಬಲದಲ್ಲಿ ಆತನನ್ನು ಪ್ರಕಟಿಸಿದವು. ಆತನ ಮಾತುಗಳು ಆ ಕೃತ್ಯಗಳಿಗೆ ಉದ್ದೇಶಗಳನ್ನು ಕೊಡುತ್ತ, ಅವರಿಗೆ ಪ್ರಕಟಿಸಲ್ಪಟ್ಟವು.[4] ನಂತರದ ಸಂತತಿಯವರು ಲಾಭ ಪಡೆಯಬೇಕೆಂದು ಇದೆಲ್ಲವೂ ಬರೆಯಲ್ಪಟ್ಟಿತು.[5] ಮಿತಿಮೀರದೇ ಅಥವಾ ಕೊರತೆಯಿಲ್ಲದೇ ಬರೆಯಲ್ಪಟ್ಟದಕ್ಕೆ ಜನರು ನಿಕಟವಾಗಿ ಅಧೀನರಾಗಬೇಕೆಂದು ಎಚ್ಚರಿಸಲ್ಪಟ್ಟರು.[6]

ದೇವರ ಪ್ರಕಟಿಸಲ್ಪಟ್ಟ ಕೃತ್ಯಗಳು ಹಾಗೂ ಮಾತುಗಳು ಆತನ ಜನರೊಂದಿಗಿನ ಆತನ ಸಂಬಂಧದಲ್ಲಿ ಅವಶ್ಯವಾದ ಅಂಶಗಳಾಗಿದ್ದವು. ಆತನು ಕಾರ್ಯ ಮಾಡಿರದಿದ್ದರೆ ಅವರು ಆತನ ಬಲವನ್ನು ತಿಳಿದುಕೊಳ್ಳುತ್ತಿರಲಿಲ್ಲ. ಆತನು ಮಾತನಾಡದಿದ್ದರೆ ಅವರು ಆತನ ಚಿತ್ತವನ್ನು ತಿಳಿಯುತ್ತಿರಲಿಲ್ಲ. ಈ "ರಕ್ಷಣಾ ಇತಿಹಾಸವು" ಬರೆಯಲ್ಪಟ್ಟಿರದಿದ್ದರೆ, ಅವರು ಜ್ಞಾಪಕದಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ. ಅವರು ಜ್ಞಾಪಿಸಿಕೊಳ್ಳದಿದ್ದರೆ ಅವರು ಆತನಿಂದ ಬೇರ್ಪಡುತ್ತಿದ್ದರು. ಅವರ ಮಹಾನಾಯಕರಲ್ಲಿ ಒಬ್ಬನು ಹೀಗೆ ಹೇಳಿದ್ದರಲ್ಲಿ ಆಶ್ಚರ್ಯವಿರುವದಿಲ್ಲ.

> ... ಯೆಹೋವನು ನನ್ನ ಬಂಡೆಯೂ ನನ್ನ ಕೋಟೆಯೂ ನನ್ನ ವಿಮೋಚಕನೂ ಆಗಿದ್ದಾನೆ: ಆತನು ನನ್ನ ಆಶ್ರಯಗಿರಿಯಾಗಿರುವ ದೇವರೂ ನನ್ನ ಗುರಾಣಿಯು ನನ್ನ ರಕ್ಷಣೆಯ ಕೊಂಬು ನನ್ನ ದುರ್ಗವೂ ನನ್ನ ಶರಣನೂ ಬಲಾತ್ಕಾರಿಯಿಂದ ನನ್ನನ್ನು ರಕ್ಷಿಸುವವನೂ ಆಗಿದ್ದಾನೆ (2 ಸಮುವೇಲ 22:2, 3).

## ಪ್ರವಾದಿಗಳಲ್ಲಿ ಪ್ರಕಟಿಸಿಕೊಂಡನು

ದೇವರ ಅತೀ ದೊಡ್ಡ ಹಾಗೂ ಅತೀ ಪರಿಪೂರ್ಣವಾದ ಪ್ರಕಟನೆಯು ಇನ್ನೂ ಬರಲಿಕ್ಕಿತ್ತು. ಆತನ ಚಿತ್ತ ಹಾಗೂ ಯೋಜನೆಗಳು ಪ್ರಕಟಿಸಲ್ಪಟ್ಟ ಪ್ರಮುಖ ಸಾಧನವು ದೇವರ ಪ್ರವಾದಿಗಳಾಗಿದ್ದರು. ಸಿನಾಯಿ ಒಡಂಬಡಿಕೆಯ ಅಧೀನತೆಯಲ್ಲಿ ಜೀವಿಸುತ್ತ, ಅವರು ಬರಲಿಕ್ಕಿದ್ದ ಹೊಸ ಒಡಂಬಡಿಕೆಯ ಬಗ್ಗೆ ಮಾತಾಡಿದರು. ಯೆರೆಮೀಯನು ಈ ಒಡಂಬಡಿಕೆಯನ್ನು - ಅದರ ಮೂಲವನ್ನು, ಅದರ ಸ್ವಭಾವವನ್ನು ಹಾಗೂ ಅದನ್ನು ಸ್ವೀಕರಿಸುವವರಿಗೆ ಅದರ ಲಾಭಕರ ಪರಿಣಾಮವನ್ನು ವಿವರಿಸಿದನು:

> ಯೆಹೋವನು ಇಂತೆನ್ನುತ್ತಾನೆ, "ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು. ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈಹಿಡಿದು ಐಗುಪ್ತ ದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದ್ದಲ್ಲ, ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿ

ದರಷ್ಟೇ." ಯೆಹೋವನು ಇಂತೆನ್ನುತ್ತಾನೆ, "ಆ ದಿನಗಳು ಬಂದಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವುದು" "ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು, ಅವರ ಹೃದಯದೊಳಗೆ ಅದನ್ನು ಬರೆಯುವೆನುಣಿ ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರುಣಿ ನೆರೆಯವರೂ ಅಣ್ಣ ತಮ್ಮಂದಿರೂ ಒಬ್ಬರಿಗೊಬ್ಬರು - ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸ ಬೇಕಾಗಿರುವದಿಲ್ಲಣಿ ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರುಣಿ ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ. ಇದು ಯೆಹೋವನ ನುಡಿ" (ಯೆರೆಮೀಯ 31:31-34).

ದೇವರ ಪ್ರವಾದಿಗಳಲ್ಲಿ ಒಬ್ಬಾತನನ್ನು ಬಿಟ್ಟರೆ ಮೋಶೆಗೆ ಹೋಲಿಕೆಯುಳ್ಳವರು - ಯಾರೂ ಇರಲಿಲ್ಲ (ಧರ್ಮೋಪದೇಶಕಾಂಡ 34:10-12). ತನ್ನಂತಿರುವ ಪ್ರವಾದಿಯು ಬರುವಂಥದ್ದರ ಬಗ್ಗೆ ಮೋಶೆಯು ಹೇಳಿದನು. ಈ ಪ್ರವಾದಿಗೆ ಜನರು ಸ್ಪಷ್ಟವಾಗಿ ಕೇಳಬೇಕು, ಯಾಕಂದರೆ ಅವನು ದೇವರ ವಾಕ್ಯವನ್ನು ಮಾತಾಡುವನು (ಧರ್ಮೋಪ ದೇಶಕಾಂಡ 18:15-19).

## ತನ್ನ ಕುಮಾರನಲ್ಲಿ ಪ್ರಕಟಿಸಿಕೊಂಡನು

ಈ ಪ್ರವಾದಿಯು ಅನಂತರದಲ್ಲಿ ಶ್ರಮೆ ಪಡುವ ಮೆಸ್ಸೀಯನಂತೆ, ಯೇಸುವಿನಂತೆ, ಮರಣಕ್ಕೆ ಒಪ್ಪಿಸಲ್ಪಟ್ಟ ನೀತಿವಂತನಂತೆ (ಅಪೊಸ್ತಲರ ಕೃತ್ಯ 7:52, 53) ಗುರುತಿಸಲ್ಪಟ್ಟನು (ಅಪೊಸ್ತಲರ ಕೃತ್ಯ 3:17-26). ಆತನು ಶಿಲುಬೆಗೆ ಹಾಕಲ್ಪಡುವ ಮೊದಲು ತನ್ನ ಶಿಷ್ಯರೊಂದಿಗೆ ಇದ್ದನು. ಈ ಊಟದ ಸಮಯದಲ್ಲಿ ಆತನು ರೊಟ್ಟಿಗೂ ದ್ರಾಕ್ಷಾರಸಕ್ಕೂ ಹೊಸ ಅರ್ಥವನ್ನು ಕೊಟ್ಟನು. ರೊಟ್ಟಿಯ ಬಗ್ಗೆ, "ತೆಗೆದು ಕೊಳ್ಳಿರಿ, ತಿನ್ನಿರಿ, ಇದು ನನ್ನ ದೇಹ" ಎಂದು ಹೇಳಿದನು. ಪಾತ್ರೆಯ ಬಗ್ಗೆ, "ಇದರೊಳಗಿಂದ ನಿವೆಲ್ಲರೂ ಕುಡಿಯಿರಿ. ಇದು ನನ್ನ (ಹೊಸ) ಒಡಂಬಡಿಕೆಯ ರಕ್ತಣಿ ಅನೇಕರ ಪಾಪಗಳ ಕ್ಷಮಾಪಣೆಗಾಗಿ ಸುರಿಸಲ್ಪಡುವ ರಕ್ತ" ಎಂದು ಹೇಳಿದನು (ಮತ್ತಾಯ 26:26-28ಣಿ ಮಾರ್ಕ 14:22-24ಣಿ ಲೂಕ 22:19, 20). ತನ್ನ ಯಜ್ಞದ ಮೂಲಕವಾಗಿ ಆತನು ಹೊಸದಾದ ಮತ್ತು ಹೆಚ್ಚು ಉತ್ತಮವಾದ ಒಡಂಬಡಿಕೆಯ ಮಧ್ಯಸ್ಥನಾದನು. ಮೊದಲನೆಯ ಒಡಂಬಡಿಕೆಯನ್ನು ಆತನು ಬಳಕೆಯಲ್ಲಿ ಇಲ್ಲದ್ದನ್ನಾಗಿ ಮಾಡಿದನುಣಿ ಅದೇ ಸಮಯದಲ್ಲಿ ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ನಂಬಿಕೆಯಿಂದ ಜೀವಿಸಿದವರಿಗಾಗಿ ವಿಮೋಚನೆಯ ಸಾಧನೆಗಳನ್ನು ಒದಗಿಸಿಕೊಟ್ಟನು (ಇಬ್ರಿಯ 8-10).

ಈ ನಜರೇತಿನ ಯೇಸುವು ದೇವರ ಅತೀ ಶ್ರೇಷ್ಠ ಪ್ರಕಟಣೆಯಾಗಿದ್ದಾನೆ. "ದೇವರು ನಮ್ಮೊಂದಿಗಿದ್ದಾನೆ" ಎಂದರ್ಥ ಕೊಡುವ "ಇಮ್ಮಾನುವೇಲ್" ಎಂದು ಯೆಶಾಯನಿಂದ ಹೇಳಲ್ಪಟ್ಟಂತೆ - ಆತನು ಗುರುತಿಸಲ್ಪಟ್ಟನು (ಯೆಶಾಯ 7:14ಣಿ ಮತ್ತಾಯ 1:20-23). ಆದುದರಿಂದ ತನ್ನ ಜನಾಂಗಕ್ಕಾಗಿರುವ ದೇವರ ಪ್ರಕಟಣಾತ್ಮಕ ಸಂಬಂಧವು ಆತನ ಕುಮಾರನಾದ ಯೇಸುಕ್ರಿಸ್ತನಲ್ಲಿ ಅತೀ ದೊಡ್ಡ ಉನ್ನತಕ್ಕೇರಿತು.

ದೇವರ ಕೃಪಾ ಮಹಾ ಐಶ್ವರ್ಯಕ್ಕಾನುಸಾರವಾಗಿ ತನ್ನ ಪ್ರಿಯನಲ್ಲಿ ಆತನ ರಕ್ತದ ಮೂಲಕ ಆತನಲ್ಲಿ ವಿಮೋಚನೆ, ಅಂದರೆ ಅಪರಾಧಗಳ ಕ್ಷಮಾಪಣೆಯಾಯಿತು, ಅದನ್ನು ನಮಗೆ ಹೇರಳವಾಗಿ ಸುರಿಸಿದ್ದಾನೆ. ದೇವರು ತನ್ನಲ್ಲಿ ಉದ್ದೇಶ

ಮಾಡಿಕೊಂಡ ತನ್ನ ದಯಾ ಚಿತ್ತ ಪ್ರಕಾರದ ರಹಸ್ಯವನ್ನು ಎಲ್ಲಾ ಜ್ಞಾನ ಹಾಗೂ ಬುದ್ಧಿಯೊಂದಿಗೆ ನಮಗೆ ತಿಳಿಯಪಡಿಸಿದನು (ಎಫೆಸ 1:7-9).

---

ಟಿಪ್ಪಣಿಗಳು

[1]ಆದಿಕಾಂಡ 13:14ಣಿ 26:2ಣಿ 28:13ಣಿ ವಿಮೋಚನಕಾಂಡ 6:2, 8ಣಿ 1 ಸಮುವೇಲ 3:10ಣಿ 2 ಸಮುವೇಲ 7:4ಣಿ ಯೆಹೆಜ್ಕೇಲ 3:22. [2]James B. Pritchard, ed., "The Middle Assyrian Laws" in *Ancient Near Eastern Texts Relating to the Old Testament,* 2d ed., trans. F. G. and Theophile J. Meeke (Princeton, N.J.: Princeton University, 1955), 180-88. [3]I.e., the Hebrew phrase *sereth haddbarim* means "the ten words"; the Greek (LXX), *hoi deka logoi,* means "the ten words," or "Decalogue." [4]Arnold B. Rhodes, *The Mighty Acts of God* (Richmond, Va.: CLC Press, 1964), 12-13. [5]ಧರ್ಮೋಪದೇಶಕಾಂಡ 31:24ಣಿ ಯೆಹೋಶುವ 1:8ಣಿ ನೆಹೆಮೀಯ 8:13, 14ಣಿ ಯೆಶಾಯ 30:8ಣಿ ಯೆರೆಮೀಯ 30:1, 2ಣಿ ಇತ್ಯಾದಿ. [6]ಧರ್ಮೋಪದೇಶಕಾಂಡ 4:1, 2ಣಿ ಜ್ಞಾನೋಕ್ತಿ 30:5, 6ಣಿ ಮಾರ್ಕ 11:17ಣಿ ಪ್ರಕಟನೆ 22:18, 19.